# ರವಿ ಸಂಕ್ರಮಣ



ಈ ಹೊತ್ತಿನ ಕನ್ನಡ ಚಿತ್ರರಂಗದ ಬಹುಬೇಡಿಕೆಯ ಖಳನಟ ಎನ್ನುವ ಖ್ಯಾತಿ ರವಿಶಂಕರ್ ಅವರದು. 'ಕನ್ನಡವೇ ನಮ್ಮಮ್ಮ' ಎನ್ನುವ ಈ ತೆಲುಗಿನ ಪ್ರತಿಭೆ ಕಳೆದ ವಾರ ತನ್ನ 50ನೇ ಹುಟ್ಟುಹಬ್ಬ ಆಚರಿಸಿಕೊಂಡಿತು. ಐವತ್ತರ ಸಂಕ್ರಮಣದಲ್ಲಿ ಯಾರ್‍ಯಾರ ನೆನೆಯಾಲಿ ಎನ್ನುವಂತೆ ಭಾವುಕರಾಗಿದ್ದ ರವಿಶಂಕರ್ ನೆನಪಿಸಿಕೊಂಡಿದ್ದು, ಕನ್ನಡ ಚಿತ್ರರಂಗ ಮತ್ತು ಕನ್ನಡ ಪ್ರೇಕ್ಷಕರ ಉಪ್ಪಿನ ಋಣವನ್ನು!

ತೆಲುಗಿನಲ್ಲಿ ಡಬ್ಬಿಂಗ್ ಕಲಾವಿದನಾಗಿ ಹಲವು ಸೂಪರ್‌ಸ್ಟಾರ್‌ಗಳಿಗೆ ಕಂಠದಾನ ಮಾಡಿರುವ ರವಿಶಂಕರ್ ಅವರೊಳಗಿನ ನಟನೆಯ ಹಸಿವನ್ನು ಗುರ್ತಿಸಿದ್ದು ಕನ್ನಡ ಚಿತ್ರರಂಗ. 'ನಿಮ್ಮ ಕಂಠವಷ್ಟೇ ಸಾಕು' ಎನ್ನುವ ತೆಲುಗು ಚಿತ್ರರಂಗದ ಧೋರಣೆಗೆ ರವಿಶಂಕರ್ ಒಳಗೊಳಗೇ ನವೆದುಹೋಗಿದ್ದರು. ಕಲಾವಿದನಾಗಿ ಅವರಿಗೆ ಜನಪ್ರಿಯತೆ ದೊರಕಿಸಿಕೊಟ್ಟಿದ್ದು ಸುದೀಪ್‌ರ 'ಕೆಂಪೇಗೌಡ'. ಈ ಚಿತ್ರ ತೆರೆಕಂಡಿದ್ದು 2011ರಲ್ಲಿ. ನಂತರದ ಐದು ವರ್ಷಗಳಲ್ಲಿ ರವಿಶಂಕರ್ ಕನ್ನಡ ಚಿತ್ರರಂಗದ ಅವಿಭಾಜ್ಯ ಅಂಗವಾಗಿ, ಕನ್ನಡಿಗರೇ ಆಗಿ ಬೆಳೆದಿರುವುದು ವಿಶೇಷ. ಐದು ವರ್ಷಗಳಲ್ಲಿ ಐವತ್ತು ಚಿತ್ರಗಳನ್ನು ದಾಟಿ ಮುನ್ನಡೆದಿರುವುದು ಅವರ ಜನಪ್ರಿಯತೆಗೆ ಉದಾಹರಣೆ.

ನಟನೆಯ ಜೊತೆಗೆ ಸಂಗೀತ, ನೃತ್ಯ ಪ್ರಕಾರಗಳೂ ರವಿಶಂಕರ್ ಅವರಿಗೆ ಗೊತ್ತು. ಐವತ್ತರ ಪುಲಕದಲ್ಲಿರುವ ರವಿಶಂಕರ್, ಈಚಿನ ದಿನಗಳಲ್ಲಿ ತಮಗೆ ದೊರೆಯುತ್ತಿರುವ ಪಾತ್ರಗಳ ಏಕತಾನತೆಯನ್ನೂ ಬಲ್ಲರು. ಮುಂದಿನ ದಿನಗಳಲ್ಲಾದರೂ ಪೌರಾಣಿಕ ಚಿತ್ರಗಳಲ್ಲಿ, ವಿಶೇಷವಾಗಿ ದುರ್ಯೋಧನನಂಥ ಖಳವರ್ಚಸ್ಸಿನ ಪಾತ್ರದಲ್ಲಿ ಕಾಣಿಸಿಕೊಳ್ಳುವ ಹಂಬಲ ಅವರ ಅಂತರಂಗದಲ್ಲಿದೆ. ಮುಂದಿನ ದಿನಗಳಲ್ಲಿ ತಮ್ಮ ಪುತ್ರನನ್ನೂ ಕನ್ನಡ ಚಿತ್ರರಂಗಕ್ಕೆ ಪರಿಚಯಿಸುವ ಆಸೆ ಅವರದು.





# ಪೂಜಾ ಯುಗಳ

ಮಳೆ ಹುಡುಗಿ ಪೂಜಾಗಾಂಧಿ ಒಮ್ಮೆಗೇ ಎರಡು ಸಿಹಿಸುದ್ದಿ ನೀಡಿದ್ದಾರೆ. ಒಂದು ಸಿನಿಮಾದ್ದು, ಮತ್ತೊಂದು ಗಟ್ಟಿಮೇಳದ್ದು!

2017 ಪೂಜಾ ಪಾಲಿಗೆ ಕಲ್ಯಾಣಮಯ ಆಗಲಿದೆ! ವರ್ಷದ ಆರಂಭದಲ್ಲೇ ಅವರು ಸಪ್ತಪದಿ ತುಳಿಯುವ ಸಿದ್ಧತೆಯಲ್ಲಿದ್ದಾರೆ. ಪ್ರಶಾಂತ್ ಎನ್ನುವ ಉದ್ಯಮಿಯನ್ನು ಅವರು ಕೈಹಿಡಿಯುತ್ತಿದ್ದಾರಂತೆ. 'ರಾವಣಿ' ಸಿನಿಮಾದ ವೇಳೆ ಪ್ರಶಾಂತ್ ಹಾಗೂ ಪೂಜಾ ನಡುವೆ ಚಿಗುರಿದ ಸ್ನೇಹ, ಪ್ರೇಮವಾಗಿ ಪರಿಣಮಿಸಿದ್ದು, ಈಗ ಮದುವೆಯವರೆಗೆ ಬಂದು ನಿಂತಿದೆ. ನಾಲ್ಕು ವರ್ಷಗಳ ಹಿಂದೆ ಆನಂದ್ ಗೌಡ ಎನ್ನುವವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡು ಮುರಿದುಕೊಂಡಿದ್ದ ಪೂಜಾ, ಈಗ ಹೊಸಜೀವನಕ್ಕೆ ಕಾಲಿಡುವ ಉತ್ಸಾಹದಲ್ಲಿದ್ದಾರೆ. ಗೆಳೆಯನ ಹೆಸರು ಪೂಜಾ ಅವರ ಕೈಮೇಲೆ ಹಚ್ಚೆಯಾಗಿ ಅರಳಿದೆ.

ಪೂಜಾ ನೀಡಿರುವ ಮತ್ತೊಂದು ಸುದ್ದಿ ಸಿನಿಮಾದ್ದು. ಅವರ ನಟನೆಯ 'ಜಿಲೇಬಿ' ಈಗ ತೆರೆಕಾಣಲು ಸಿದ್ಧತೆ ನಡೆಸಿದೆ. ಶಂಕರ್ ನಿರ್ಮಾಣ–ನಿರ್ದೇಶನದ 'ಜಿಲೇಬಿ' ಹೆಸರಿನಲ್ಲಿ ಸಿಹಿ ಇದ್ದರೂ ಹೂರಣದಲ್ಲಿ ಇರುವುದು ಗರಂ ಮಸಾಲೆ! ಈ ಚಿತ್ರದಲ್ಲಿ ಪೂಜಾ ಅವರದು ವೇಶ್ಯೆಯ ಪಾತ್ರ. 'ಅಭಿನೇತ್ರಿ' ಚಿತ್ರದ ನಂತರ ಪ್ರೇಕ್ಷಕರಿಗೆ ಮುಖಾಮುಖಿ ಆಗುತ್ತಿರುವ 'ಜಿಲೇಬಿ' ಬಗ್ಗೆ ಪೂಜಾ ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ.

ಇತ್ತೀಚಿನ ವರ್ಷಗಳಲ್ಲಿ ಪೂಜಾ ಆಯ್ಕೆ ಮಾಡಿಕೊಳ್ಳುತ್ತಿರುವ ಪಾತ್ರಗಳೆಲ್ಲವೂ ಅಭಿನಯಕ್ಕೆ ಸವಾಲೊಡ್ಡುವಂತಿವೆ ಎನ್ನುವುದು ಗಮನಾರ್ಹ. 'ದಂಡುಪಾಳ್ಯ' ಚಿತ್ರದ ಒರಟು ಪಾತ್ರದಲ್ಲಿನ ಅವರ ಅಭಿನಯ ಚಿತ್ರರಸಿಕರ ಮೆಚ್ಚುಗೆ ಪಡೆದಿತ್ತು. ನಟಿ ಕಲ್ಪನಾ ಅವರ ಜೀವನಚರಿತ್ರೆ ಎಂದು ಬಿಂಬಿಸಲಾಗಿದ್ದ 'ಅಭಿನೇತ್ರಿ' ಗೆಲ್ಲದಿದ್ದರೂ – ಪ್ರಯತ್ನದ ರೂಪವಾಗಿ ಗಮನಸೆಳೆದಿತ್ತು. ಈಗ 'ಜಿಲೇಬಿ'ಯ ಸರದಿ. ಈ ಚಿತ್ರದ ಮುಖ್ಯ ಪಾತ್ರಗಳಲ್ಲಿ ಎಚ್.ಜಿ. ದತ್ತಾತ್ರೇಯ, ಯಶಸ್, ವಿಜಯ್ ಚೆಂಡೂರ್ ನಟಿಸಿದ್ದಾರೆ.

■ ರಘು